ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 01 ಆರ್‌ಐಪಿ[2] 2018

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ: 10/04/2018.

**: ಜ್ಞಾಪನ :**

**ವಿಷಯ:** ಸಂಸ್ಥೆಯ 2017-18ನೇ ಸಾಲಿನ ಮತ್ತು ಹಿಂದಿನ ಬಾಕಿ ಇರುವ ವರ್ಷಗಳ ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯನ್ನು ಕಳುಹಿಸಿಕೊಡುವ ಬಗ್ಗೆ.

-0-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಮ್ಮ ಸಂಸ್ಥೆಯ 2017-18ನೇ ಸಾಲಿನ ಮತ್ತು ಹಿಂದಿನ ಬಾಕಿ ಇರುವ ವರ್ಷಗಳ ವಾರ್ಷಿಕ ದಾಸ್ತಾನು ಪರಿಶೀಲನೆಯನ್ನು ಮಾಡಿ, ಪರಿಶೀಲನೆ ಮಾಡಿದ ನಂತರ ದಾಸ್ತಾನು ಪರಿಶೀಲನಾ ವರದಿಯನ್ನು ಪ್ರತಿ ಕೋರ್ಸಿಗೆ ಲ್ಯಾಬ್ / ವರ್ಕ್ ಷಾಪ್‌ಗಳಿಗೆ ಸಂಬಂಧಿಸಿದ್ದಂತೆ ಕಂಡು ಬಂದಿರುವ ಅನುಪಯುಕ್ತ ವಸ್ತುಗಳು ಲೆಡ್ಜರ್‌ನಲ್ಲಿ ನಮೂದಿಸಿದ ದಾಸ್ತಾನಿಗಿಂತ ಕಡಿಮೆ ಬಂದಿರುವ ವಸ್ತುಗಳು/ ಉಪಕರಣಗಳು, ಪೀಠೋಪಕರಣಗಳು, ಪುಸ್ತಕಗಳ ಪಟ್ಟಿ ಮತ್ತು ಕಂಪ್ಯೂಟರ್‌ಗೆ ಸಂಬಂಧಿಸಿದ ಆಯಾ ವಿಭಾಗದ ವಸ್ತುಗಳನ್ನು ಬೇರೆ ಬೇರೆ ಪಟ್ಟಿ ಮಾಡಿ ನಮೂನೆಯಲ್ಲಿ ತೋರಿಸಿರುವ ಪಟ್ಟಿಯಂತೆ ಪ್ರತಿ ಪುಟದಲ್ಲಿ ಆಯಾ ವಿಭಾಗಾಧಿಕಾರಿ ಸಹಿ, ದಾಸ್ತಾನು ಹೊಂದಿರುವವರ ಸಹಿ, ದಾಸ್ತಾನು ಪರಿಶೀಲನಾಧಿಕಾರಿಗಳ ಸಹಿ, ಪ್ರಾಚಾರ್ಯರ ಸಹಿ ಮಾಡಿ ಸಂಬಂಧಿಸಿದ ದಾಖಲೆಗಳನ್ನು ಈ ಜ್ಞಾಪನ ತಲುಪಿದ 15 ದಿನಗಳೊಳಗೆ ಅತೀ ಜರೂರಾಗಿ ನಿರ್ದೇಶನಾಲಯಕ್ಕೆ ಕಳುಹಿಸಿಕೊಡಬೇಕೆಂದು ಈ ಮೂಲಕ ತಿಳಿಸಲಾಗಿದೆ.

ನಿರ್ದೇಶಕರು

ಇವರಿಗೆ,

1. ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್, ಇಂಜಿನಿಯರಿಂಗ್ ಕಾಲೇಜು, ಕಿರಿಯ ತಾಂತ್ರಿಕ ಶಾಲೆಗಳ ಪ್ರಾಚಾರ್ಯರುಗಳಿಗೆ.
2. ಆಡಳಿತಾಧಿಕಾರಿಯವರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
3. ಇ-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.